ಎನ್ನುತ್ತಾರೆ, 'Make Love Not Scars' ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ತಾನಿಯಾ ಸಿಂಗ್. 'ಎಲ್ಲಿಯವರೆಗೆ ಆ್ಯಸಿಡ್ ಎಲ್ಲೆಡೆಯೂ ಸುಲಭವಾಗಿ ದೊರೆಯುವುದೋ ಅಲ್ಲಿಯವರೆಗೂ ಅಮಾನುಷ ಕೃತ್ಯಗಳು ಕಡಿಮೆಯಾಗುವುದಿಲ್ಲ' ಎನ್ನುವುದು ಅವರ ಸ್ಪಷ್ಟಮಾತು. ಭಾರತದಂತೆ ಬಾಂಗ್ಲಾದೇಶದಲ್ಲಿ ಕೂಡ ಆ್ಯಸಿಡ್ ಮಾರಕಾಸ್ತ್ರದಂತೆ ಬಳಕೆಯಾಗುತ್ತದೆ. ಆ್ಯಸಿಡ್ ಎರಚುವವರಿಗೆ ಮರಣದಂಡನೆ ವಿಧಿಸಲು ಅವಕಾಶ ಕಲ್ಪಿಸಿದ ಬಾಂಗ್ಲಾ ಸರ್ಕಾರ, ಆ್ಯಸಿಡ್ ಮಾರಾಟಕ್ಕೆ ಹಲವು ನಿರ್ಬಂಧಗಳನ್ನು ಹೇರಿದ ಮೇಲೆ ಅಲ್ಲಿ ಆ್ಯಸಿಡ್ ದಾಳಿಗಳು ಕಡಿಮೆಯಾಗಿರುವುದನ್ನು ತಾನಿಯಾ ತಮ್ಮ ಮಾತಿಗೆ ಉದಾಹರಣೆಯಾಗಿ ನೆನಪಿಸುತ್ತಾರೆ. 2002ರಲ್ಲಿ ಬಾಂಗ್ಲಾದೇಶ ಆ್ಯಸಿಡ್ ಮಾರಾಟ ನಿಯಂತ್ರಣ ಕಾಯ್ದೆಯನ್ನು ಜಾರಿಗೊಳಿಸಿತು. ಆಗ ವರ್ಷಕ್ಕೆ 360ರಷ್ಟು ದಾಖಲಾಗುತ್ತಿದ್ದ ಪ್ರಕರಣಗಳ ಸಂಖ್ಯೆ, 2009ರ ವೇಳೆಗೆ 116ಕ್ಕೆ ಇಳಿದಿತ್ತು. ಅಂಥ ಕಠಿಣ ಕಾನೂನು ಭಾರತಕ್ಕೂ ಬೇಕಾಗಿದೆ.

ಸದ್ಯಕ್ಕೆ ನಮ್ಮ ಕಾನೂನಿನಲ್ಲಿ ಆ್ಯಸಿಡ್ ದಾಳಿಕೋರರಿಗೆ ಗರಿಷ್ಠ 10 ವರ್ಷಗಳ ಜೈಲುಶಿಕ್ಷೆ ವಿಧಿಸಲು ಅವಕಾಶವಿದೆ. ವಿಪರ್ಯಾಸವೆಂದರೆ, ಕೆಳ ಕೋರ್ಟುಗಳಲ್ಲಿ ಗರಿಷ್ಠ ಶಿಕ್ಷೆ ಪಡೆದ ಅಪರಾಧಿಗಳು, ಮೇಲಿನ ಕೋರ್ಟುಗಳಿಗೆ ಹೋಗಿ ತಮ್ಮ ಶಿಕ್ಷೆ ತಗ್ಗಿಸಿಕೊಂಡಿರುವುದಿದೆ. 2013ಕ್ಕೆ ಮೊದಲಂತೂ ಆ್ಯಸಿಡ್ ದಾಳಿಗಳಿಗೆ ಸಂಬಂಧಿಸಿದಂತೆ ವಿಚಾರಣೆ ನಡೆಸಿ ಶಿಕ್ಷಿಸಲು ನಿರ್ದಿಷ್ಟ ಕಾನೂನು ಮಾರ್ಗದರ್ಶಿ ಸೂತ್ರಗಳೇ ಭಾರತದಲ್ಲಿ ಇರಲಿಲ್ಲ. 2016ರಲ್ಲಿ ಆ್ಯಸಿಡ್ ದಾಳಿಗೆ ಒಳಗಾದವರನ್ನು ಅಂಗವಿಕಲರ ಪಟ್ಟಿಗೆ ಸೇರಿಸಿ, ಅವರಿಗೆ ಶಿಕ್ಷಣ ಮತ್ತು ಉದ್ಯೋಗದ ಅವಕಾಶಗಳಲ್ಲಿ ಆದ್ಯತೆ ನೀಡಲಾಗುತ್ತಿದೆ. ಪ್ರಸ್ತುತ ಸರ್ಕಾರಿ ನೌಕರಿಗಳಲ್ಲಿ ಶೇ.3ರ ಮೀಸಲಾತಿ ಸಂತ್ರಸ್ತರಿಗೆ ದೊರೆಯುತ್ತಿದೆ.

ಆ್ಯಸಿಡ್ ದಾಳಿಯನ್ನು ಜಾಮೀನುರಹಿತ ಅಪರಾಧವೆಂದು ಪರಿಗಣಿಸುವಂತೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ. ದಾಳಿಗೊಳಗಾದವರಿಗೆ ಮೂರು ಲಕ್ಷ ರೂಪಾಯಿ ಪರಿಹಾರ ನೀಡುವಂತೆ ರಾಜ್ಯ ಸರ್ಕಾರಗಳಿಗೆ ಸೂಚಿಸಿದೆ. ಆದರೆ, ಈ ಮೊತ್ತ ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಿದ್ದಂತೆ. ಆ್ಯಸಿಡ್ ದಾಳಿಗೆ ಒಳಗಾದವರಿಗೆ ಯಾವ ಆಸ್ಪತ್ರೆಯೂ ಚಿಕಿತ್ಸೆಯನ್ನು ನಿರಾಕರಿಸುವಂತಿಲ್ಲ ಹಾಗೂ ಕೇಂದ್ರ ಸರ್ಕಾರದ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ನೀಡಬೇಕು ಎನ್ನುವ ಕಾನೂನಿದೆ. ಆದರೆ, ಇದೆಲ್ಲ ಪ್ರಾಥಮಿಕ ಚಿಕಿತ್ಸೆಗೆ ಸಂಬಂಧಿಸಿದ್ದಾಯಿತು. ಚರ್ಮಕಸಿ ಎನ್ನುವುದು ದುಬಾರಿ ಬಾಬತ್ತಿನ ದೀರ್ಘಕಾಲಿಕ ಚಿಕಿತ್ಸೆ. ಮುಖ ಸುಟ್ಟುಕೊಂಡವರು ಅನೇಕ ಬಾರಿ ಚರ್ಮಕಸಿ ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾಗುತ್ತದೆ. ಚಿಕಿತ್ಸೆಯ ವೆಚ್ಚವನ್ನು ಭರಿಸುವುದು ಬಡವರಿಗೆ ಸಾಧ್ಯವಾಗದ ಮಾತು. ಆ ಕಾರಣದಿಂದಲೇ, ಇದೆಲ್ಲ ಹಣೆಬರಹ ಎಂದುಕೊಂಡು ಕುರೂಪದ ಮುಖ ಹೊತ್ತುಕೊಂಡು ಕತ್ತಲಲ್ಲಿ ಉಳಿಯುವವರೂ ಸಾಕಷ್ಟು ಮಂದಿಯಿದ್ದಾರೆ.

ಆ್ಯಸಿಡ್ ಮಾರಾಟಕ್ಕೆ ಸಂಬಂಧಿಸಿದಂತೆ ಒಂದಿಷ್ಟು ನಿಯಮಾವಳಿಗಳು ನಮ್ಮಲ್ಲಿವೆ. ಆ್ಯಸಿಡ್ ಮಾರುವಾಗ ಗುರುತಿನ ಚೀಟಿ ಕೇಳಬೇಕು, ಗ್ರಾಹಕರ ವಿಳಾಸವನ್ನು ದಾಖಲಿಸಿಕೊಳ್ಳಬೇಕು ಎನ್ನುವ ನಿಯಮಾವಳಿಯಿದೆ. ಆದರೆ, ಹಾಲಿನ ಪ್ಯಾಕೆಟ್‌ಗಳಷ್ಟು ಸಲೀಸಾಗಿ ಇಪ್ಪತ್ತು ಮೂವತ್ತು ರೂಪಾಯಿಗೊಂದು ಸೀಸೆ ಆ್ಯಸಿಡ್ ಪೇಟೆಯಲ್ಲಿ ಲಭ್ಯ. ವಾಣಿಜ್ಯ ಮತ್ತು ವೈಜ್ಞಾನಿಕ ಉದ್ದೇಶಗಳನ್ನು ಹೊರತುಪಡಿಸಿ ಆ್ಯಸಿಡ್ ಮಾರಾಟವನ್ನು ನಿಷೇಧಿಸಬೇಕು ಎಂದು 2009ರಲ್ಲಿ ಕಾನೂನು ಆಯೋಗ ತನ್ನ ವರದಿಯಲ್ಲಿ ತಿಳಿಸಿದೆ. ಆದರೆ, ಸರ್ಕಾರ ಮಾತ್ರ ಆ್ಯಸಿಡ್ ಮಾರಾಟಕ್ಕೆ ಅಂಕುಶ ಹಾಕಲು ಈವರೆಗೆ ಪರಿಣಾಮಕಾರಿ ಕ್ರಮಗಳನ್ನೇ ಕೈಗೊಂಡಿಲ್ಲ.

'ಆ್ಯಸಿಡ್ ಎಲ್ಲೆಡೆ ಸುಲಭವಾಗಿ ದೊರೆಯುತ್ತಿದೆ. ಅದಕ್ಕೆ ಸಂಬಂಧಿಸಿದ ವಿಡಿಯೊಗಳನ್ನು ಕೂಡ ನಾವು ಸಂಗ್ರಹಿಸಿದ್ದೇವೆ. ಆದರೆ, ಇದರಿಂದ ಏನೂ ಉಪಯೋಗವಿಲ್ಲ' ಎನ್ನುತ್ತಾರೆ ಲಕ್ಷ್ಮಿ ಅಗರವಾಲ್. ಅವರು ಕೂಡ ಆ್ಯಸಿಡ್ ದೌರ್ಜನ್ಯಕ್ಕೆ ಒಳಗಾದವರೇ. ಈಗ ತನ್ನಂತಹ ನತದೃಷ್ಟೆಯರ ಕಣ್ಣೀರು ಒರೆಸುವ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ. ಲಕ್ಷ್ಮಿ ಅವರ ಸಾಹಸಗಾಥೆಯನ್ನು ಆಧರಿಸಿಯೇ 'ಛಪಾಕ್' ಸಿನಿಮಾ ರೂಪುಗೊಂಡಿರುವುದು.

ಸುಪ್ರೀಂ ಕೋರ್ಟ್‌ನ ಕಟ್ಟುನಿಟ್ಟಾದ ಸೂಚನೆಗಳ ನಂತರವೂ ಭಾರತದಲ್ಲಿ ದೌರ್ಜನ್ಯಗಳ ಸಂಖ್ಯೆಯೇನೂ ಕಡಿಮೆಯಾಗಿಲ್ಲ. ಸುಪ್ರೀಂ ಕೋರ್ಟು ತೀರ್ಪು ನೀಡಿದ 2013ರಲ್ಲಿ ಆ್ಯಸಿಡ್ ದಾಳಿಗಳ ಪ್ರಮಾಣ 116ರಷ್ಟಿದ್ದರೆ, 2014ರಲ್ಲಿ ಆ ಸಂಖ್ಯೆ 225 ದಾಟಿತು. ಈಗ ವಾರ್ಷಿಕ ಸರಾಸರಿ 300ರ ಆಸುಪಾಸಿನಲ್ಲಿರುವುದು, ಕಾನೂನಿನ ಅನುಷ್ಠಾನ ಸಮರ್ಪಕವಾಗಿ ಆಗುತ್ತಿಲ್ಲ ಎನ್ನುವುದನ್ನು ಸೂಚಿಸುವಂತಿದೆ. ಘಟನೆಗಳು ನಡೆದಾಗ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಮಹಿಳಾ ಆಯೋಗಗಳು ಪೊಲೀಸರಿಗೆ, ಸರ್ಕಾರಕ್ಕೆ ಪತ್ರ ಬರೆಯುತ್ತವೆ.



ಕೆಲವು ಸಲ ಆಕಸ್ಮಿಕಗಳಿಂದಲೂ ಮೈಮೇಲೆ ಆ್ಯಸಿಡ್ ಬಿದ್ದು ಅಪಘಾತ ಆಗುತ್ತದೆ. ಇನ್ನೂ ಕೆಲವು ಸಲ ಪ್ರಕರಣ ದಾಖಲಿಸಲು ಹೆದರಿ 'ಆಕಸ್ಮಿಕ' ಎಂದು ಕೃತ್ಯವನ್ನು ಮುಚ್ಚಿಹಾಕುವ ಪ್ರಯತ್ನಗಳೂ ನಡೆಯುತ್ತವೆ. ಅಂಥ ಸಂದರ್ಭಗಳಲ್ಲಿ ಮುಖದೊಟ್ಟಿಗೆ ಸತ್ಯವೂ ಆ್ಯಸಿಡ್ ಹೊಡೆತಕ್ಕೆ ಸಿಲುಕಿ ಸುಟ್ಟುಹೋಗುವುದುಂಟು. ಲಖನೌ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿರುವ ಈ ಹುಡುಗಿಗೆ 13 ವರ್ಷ. ಮುಖದ ಮೇಲೆ ಆಕಸ್ಮಿಕವಾಗಿ ಆ್ಯಸಿಡ್ ಬಿದ್ದು ಸುಟ್ಟುಹೋಗಿದೆ ಎಂದು ದಾಖಲಾಗಿದೆ.